ಅರಣ್ಯ ಇಲಾಖೆಯವರು ಇತ್ತೀಚೆಗೆ ಎಷ್ಟೆಲ್ಲ ಕ್ರಮ ಕೈಗೊಳ್ಳುತ್ತಿದ್ದಾರಲ್ಲ. ಆದರೆ ವಾಸ್ತವವಾಗಿ ನಮ್ಮನ್ನು ಅವರು ಬೆಳೆಸಬೇಕಾಗಿಲ್ಲ, ಕಡಿಯದೇ ನಮ್ಮನ್ನು ನಮ್ಮ ಪಾಡಿಗೆ ಸುಮ್ಮನೇ ಬಿಟ್ಟುಬಿಟ್ಟರೆ ಸಾಕು, ನಮಗೆ ನಾವೇ ಬೆಳೆದುಕೊಳ್ಳುತ್ತೇವೆ, ಉಳಿದುಕೊಳ್ಳುತ್ತೇವೆ, ನಮ್ಮ ಸುತ್ತ ಸ್ವಾಭಾವಿಕ ಪರಿಸರವನ್ನು ನಿರ್ಮಿಸಿಕೊಳ್ಳುತ್ತೇವೆ.

ಹೀಗೇ ಒಂದು ಸಲ ಜೋರು ಮಳೆ. ಮಳೆಯೆಂದರೆ ಅಂತಿಂಥ ಮಳೆಯಲ್ಲ. ಮಾಯದ ಮಳೆ. ನದಿಯೆನ್ನುವುದು ಎರಡೂ ದಂಡೆಗಳನ್ನೂ ಇಡುಕಿರಿದು ಅದರಾಚೆಗೂ ಚಾಚಿಕೊಳ್ಳುತ್ತ ಹರಿಯುತ್ತಿತ್ತು. ಆ ಒತ್ತಡಕ್ಕೆ ಅದರ ಬಿರುಸು ಇನ್ನೂ ಜಾಸ್ತಿಯಾಗುತ್ತಲೇ ಇತ್ತು. ಅಂಥದರಲ್ಲಿ ಕಾಡಿನಿಂದ ಗಂಧದ ಮರಗಳನ್ನು ಕಡಿದು ನದಿಯೇ ಮರವನ್ನು ಗೋಚಿಕೊಂಡು ಬಂದಿದೆಯೆನ್ನುವಂತೆ ಬಿಂಬಿಸಿ ಸಾಗಿಸುತ್ತಿದ್ದರು. ಬರೀ ಗಂಧದ ಮರಗಳನ್ನೇ ಹಾಗೆ ಸಾಗಿಸಿದರೆ ಅನುಮಾನ ಬರುತ್ತದೆಂದು ಅದರ ಜೊತೆಗೆ ಇನ್ನೊಂದಷ್ಟು ನದಿ ಪಕ್ಕದ ಮರಗಳನ್ನೂ ಕಡಿದು ನದಿಯೊಳಕ್ಕೆ ತೇಲಿಬಿಡುತ್ತಿದ್ದರು. ಇಲಾಖೆಯವರು ಇದು ಸಹಜ ಪ್ರಕ್ರಿಯೆ ಎಂದುಕೊಳ್ಳಬೇಕು, ಹಾಗೆ. ಅವುಗಳ ಜತೆ ತೇಲಿಬಿಡುತ್ತಿದ್ದ ಜಾತಿಯ ಮರಗಳನ್ನು ನಗರದ ಹತ್ತಿರ ಇನ್ನೂ ಒಂದೆರಡು ಮೈಲಿ ಸಮೀಪಕ್ಕೆ ಬರುತ್ತಿದ್ದಂತೆಯೇ ತಮಗೆ ಬೇಕಾದ ಕಡೆ ವಾಲಿಸಿಕೊಂಡು ದಡಕ್ಕೆ ತಂದು ಕ್ಷಣಾರ್ಧದಲ್ಲಿ ಕದ್ದುಮುಚ್ಚಿ ಸಾಗುಹಾಕಿಬಿಡುತ್ತಿದ್ದರು.

ಹೀಗೇ ಒಂದು ಸಲ, ಅದೂ ಇಲಾಖೆಯವರ ಗಮನಕ್ಕೆ ಬಂದುಬಿಟ್ಟಿತು. ತೆಪ್ಪದಲ್ಲಿ ನಾಲ್ಕು ಜನ ಇಲಾಖೆಯವರು ಹಿಂಬಾಲಿಸಿಕೊಂಡು ಬರುತ್ತಿದ್ದರು. ನಗರ ದಾಟುತ್ತಿದ್ದಂತೆಯೇ ನದಿಯ ಈ ದಂಡೆಯಲ್ಲೇ ಅವರ ಇಲಾಖೆ ಇದ್ದುದು. ಅಲ್ಲಿಗೆ ಅವುಗಳನ್ನು ತಂದು ಅವುಗಳನ್ನು ಸೀಜ್ ಮಾಡಬೇಕೆಂಬುದು ಅವರ ಇರಾದೆಯಾಗಿತ್ತು. ಅದಕ್ಕೆ ಇಲಾಖೆಯ ಆನೆಗಳನ್ನೂ ಅವರು ಬಳಸುತ್ತಿದ್ದರು. ಸಕ್ರೆಬೈಲಿನಲ್ಲಿ ಅವಕ್ಕೆಂದೇ ಶಿಬಿರವನ್ನು ಏರ್ಪಡಿಸಿದ್ದರು. ಅಲ್ಲೇ ಅವಕ್ಕೆ ಟ್ರೈನಿಂಗನ್ನೂ ಕೊಡುತ್ತಿದ್ದರು.

ಆದರೆ ಇಲಾಖೆಯವರು ಬೆನ್ನು ಹತ್ತಿಕೊಂಡು ಬರುತ್ತಿರುವ ವಿಚಾರ ತಿಳಿದ ಈ ಕಳ್ಳರ ಗ್ಯಾಂಗು, ಇಬ್ಬಿಬ್ಬರು ಉದ್ದದ ಹಗ್ಗವನ್ನು ಸೊಂಟಕ್ಕೆ ಬಿಗಿದುಕೊಂಡು ತುಂಬಿದ ನದಿಯೊಳಗೆ ಹಾರಿದರು. ಅವುಗಳು ಇವರ ಅಡ್ಡೆಗೆ ಇನ್ನೂ ಎರಡು ಮೂರು ಕಿಲೋಮೀಟರ್ ದೂರವಿರುವಂತೆಯೇ ನದಿಗೆ ಹಾರಿದ ಆ ಥರದ ಎಂಟು ಹತ್ತು ಜನ ಮೀನು ಹಿಡಿಯುವವರಂತೆ ಬಲೆಯನ್ನು ಆ ತೆಪ್ಪದ ಮೇಲೆ ಎಸೆದುಬಿಟ್ಟರು. ತೆಪ್ಪ ಒಂದು ಕಡೆ ಕೊಚ್ಚಿಕೊಂಡು ಹೋಗುತ್ತಿದ್ದರೆ, ಕೆಲಸಗಾರರು ಇನ್ನೊಂದು ಕಡೆ ನೀರೊಳಕ್ಕೆ ಬಿದ್ದು, ಆ ಬಲೆಯೇ ಅವರನ್ನು ಬಂಧಿಸಿದಂತಾಗಿ ಕೈಕಾಲುಗಳು ಆಡದಂತಾಗಿ ಪರಸ್ಪರ ಒಬ್ಬರಿಗೊಬ್ಬರು ತಬ್ಬಿ ಹಿಡಿದುಕೊಂಡು ಮುಳುಗಿ ಜೀವ ಕಳೆದುಕೊಂಡರು, ಪಾಪ. ಆದರೆ ಆ ಪಾಪಿಗಳು ಮಾತ್ರ ಮರದ ದಿಮ್ಮಿಗಳನ್ನು ತಮಗೆ ಎಲ್ಲಿಗೆ ಬೇಕೋ ಅಲ್ಲಿಗೆ ತಿರುಗಿಸಿಕೊಂಡು ತಂದುಕೊಳ್ಳುವಲ್ಲಿ ಯಶಸ್ವಿಯಾದರು. ಹರಿಯುವ ನದಿಗೆ ಒಳ್ಳೆಯವರಾರು, ಕೆಟ್ಟವರಾರು, ಯಾರನ್ನು ಉಳಿಸಬೇಕು, ಯಾರನ್ನು ಮುಳುಗಿಸಬೇಕು ಎಂಬ ತಾರತಮ್ಯವೇ ಇರುವುದಿಲ್ಲವಲ್ಲ. ಅದು ಒಂಥರ ನಿರ್ಲಿಪ್ತ. ಎಲ್ಲರನ್ನೂ ಎಲ್ಲವನ್ನೂ ಹೊತ್ತುಕೊಂಡು ಹೋಗಿ ಸಮುದ್ರಕ್ಕೆ ತಳ್ಳುವುದಷ್ಟೇ ತನ್ನ ಕೆಲಸ ಎಂದು ತಿಳಿದುಕೊಂಡಿರುತ್ತದೆ. ಆದರೆ ಸಮುದ್ರ ಮಾತ್ರ ಎಂಥ ಬುದ್ಧಿವಂತ ಎಂದರೆ ಹೀಗೆ ಸತ್ತವರನ್ನು, ಮರಮುಟ್ಟುಗಳನ್ನೆಲ್ಲ ತಂದು ತಂದು ದಂಡೆಗೆ ಹಾಕಿಬಿಡುತ್ತದೆ. ಒಳ್ಳೆಯದನ್ನು, ಮುತ್ತು ಹವಳಗಳಂಥ ಬೆಲೆಬಾಳುವ ಹರಳುಗಳನ್ನು ಮಾತ್ರ ತನ್ನೊಳಗೆ ಬಚ್ಚಿಟ್ಟುಕೊಂಡು, ಕೆಟ್ಟದ್ದನ್ನೆಲ್ಲ ತೇಲಿಸಿ ಸಮುದ್ರದಾಚೆಗೆ ಎಸೆಯುವುದು ಅದರ ಹುಟ್ಟುಗುಣ. ಆದರ್ಶವೆಂದರೆ ಇದೇ ಅಲ್ಲವೇ?

ಈ ಸಾಗರದ ಅಗಾಧತೆ, ವಿಶಾಲತೆಯನ್ನು ನೋಡಿದರೆ ನಮ್ಮಂಥ ಪ್ರಾಣಿಪಕ್ಷಿಮರಗಳು ವಾಸಿಸುವ ಮೇಲ್ಮಣ್ಣಿನ ಪ್ರಮಾಣ ಅತ್ಯಂತ ಕಡಿಮೆ. ಈ ಭೂಮಿಯ ನಾಲ್ಕನೆಯ ಒಂದು ಭಾಗ ಅಷ್ಟೇ. ಇನ್ನು ಮೂರು ಪಟ್ಟನ್ನು ನೀರೇ ಆಕ್ರಮಿಸಿಕೊಂಡುಬಿಟ್ಟಿದೆ. ಆ ನೀರಿನೊಳಗೆ ಎಂತೆಂಥ ಚಟುವಟಿಕೆಗಳು ನಡೆಯುತ್ತವೆ ಗೊತ್ತೇ? ಅದಕ್ಕೆ ಹೋಲಿಸಿದರೆ ಭೂಮಿ ಮೇಲಿನ ನಮ್ಮ ಚಟುವಟಿಕೆಗಳು ಏನೇನೂ ಅಲ್ಲ. ಚಿತ್ರ ವಿಚಿತ್ರವಾದ ಕೋಟ್ಯಂತರ ಪ್ರಭೇದದ ಜಲಚರಗಳ ಜೊತೆಗೆ ನಮ್ಮಂಥಲ್ಲದಿದ್ದರೂ ವಿಧವಿಧದ ಸಸ್ಯಗಳೂ ಜೀವಂತವಾಗಿವೆ. ಕಣಿವೆ, ಬೆಟ್ಟ, ಗುಡ್ಡ, ಪರ್ವತಗಳ ಸಾಲೇ ನೀರೊಳಗೂ ಇದೆ. ಅದರ ಮುಂದೆ ನಮ್ಮ ಸಹ್ಯಾದ್ರಿ ಪರ್ವತ ಶ್ರೇಣಿ ಕೂಡ ಏನೇನೂ ಅಲ್ಲವಂತೆ. ಅದರದೇ ಒಂದು ಪ್ರಪಂಚ. ನಾವು ಭೂಮಿಯ ಮೇಲೆ ಕಾಣುವ ಗಾಳಿಯ ಅರ್ಧದಷ್ಟು ಪ್ರಮಾಣದ ಆಮ್ಲಜನಕವನ್ನೂ ಈ ಸಮುದ್ರಗಳೇ ನೀಡುತ್ತವೆಯಂತೆ... ಹೀಗೆ ಸಮುದ್ರದ ಬಗೆಗಿನ ವಿಸ್ಮಯಗಳ ಅಧ್ಯಯನಕ್ಕೆಂದು ಹತ್ತಾರು ದೇಶಗಳಲ್ಲಿ ವಿಶ್ವವಿದ್ಯಾಲಯಗಳೇ ಹುಟ್ಟಿಕೊಂಡಿವೆಯಂತೆ.

ಅದಕ್ಕೆಂದೇ ಬುದ್ಧ ಮನುಷ್ಯನೂ ಸಾಗರದಂತೆ ಏಕೆ ಬದುಕಬೇಕು ಎಂದು ಹೇಳಿರುವ ವಿಚಾರಗಳಂತೂ ಮನನ ಯೋಗ್ಯವಾಗಿವೆ. ಸಮುದ್ರಕ್ಕೆ ಎಂಥ ತಾಳ್ಮೆ ಎಂದರೆ ಒಂದೇ ಬಾರಿಗೆ ಅದರ ಆಳ ಎತ್ತರವಾಗುವುದಿಲ್ಲ, ಇಲ್ಲವೆ ಎತ್ತರ ಆಳವಾಗಿಬಿಡುವುದಿಲ್ಲ. ಕ್ರಮೇಣ ಅದು ತನ್ನ ಲಯವನ್ನು ಕಂಡುಕೊಳ್ಳುತ್ತದೆ. ಅದು ಹೇಗೆ ಸದಾ ತುಂಬಿದ ಕೊಡದಂತೆ ಅಚಲವಾಗಿ, ಸುಭದ್ರವಾಗಿ ನಿಂತಿರುತ್ತದೋ ಹಾಗೆ ಮನುಷ್ಯನೂ ಇರಬೇಕು. ಸಮುದ್ರ ಸತ್ತ ಪ್ರಾಣಿಗಳನ್ನು ಸಹ ತನ್ನೊಡಲಲ್ಲಿ ಬಹುಕಾಲ ಇಟ್ಟುಕೊಳ್ಳುವುದಿಲ್ಲ; ಬದಲಾಗಿ ಕಶ್ಮಲಗಳನ್ನೆಲ್ಲ ನಿರಂತರವಾಗಿ ತಂದು ತಂದು ದಂಡೆಗೆ ಹಾಕುತ್ತಿರುತ್ತದೆ. ಹಾಗೆಯೇ ಮನುಷ್ಯ ಕೆಟ್ಟ ಗುಣಗಳನ್ನೆಲ್ಲ ನೀಗಿಕೊಳ್ಳುತ್ತಿರಬೇಕು. ಗಂಗಾ, ಯಮುನ, ಬ್ರಹ್ಮಪುತ್ರದಂಥ ಬೃಹತ್ ನದಿಗಳೂ ಕೂಡ ಸಮುದ್ರ ಸೇರಿದ ಕೂಡಲೇ ತಮ್ಮ ಅಗಾಧ ನೀರನ್ನಿರಲಿ, ತಮ್ಮ ಹೆಸರನ್ನೂ ಕಳೆದುಕೊಂಡು ಲೀನವಾಗಿಬಿಡುತ್ತವೆ. ಹೀಗೆ ಸಮುದ್ರದ ಮೇಲೂ ಸುರಿಯುವ ಮಳೆಯನ್ನೂ ಒಳಗೊಂಡು ಇಡೀ ಭೂಮಂಡಲದಲ್ಲಿ ಸುರಿಯುವ ಮಳೆಯ ಪ್ರತಿ ಹನಿಹನಿ ನೀರೂ ದೊಡ್ಡದೊಡ್ಡ ನದಿಗಳ ಮೂಲಕ ಸಮುದ್ರದಲ್ಲೇ ಐಕ್ಯಗೊಂಡರೂ ಅದು ತನ್ನ ಸ್ಥಿರತೆಯನ್ನು ಕಾಪಾಡಿಕೊಳ್ಳುತ್ತದೆ. ಹೀಗೆ ಸಾವಿರಾರು ಸಿಹಿನೀರ ನದಿಗಳು ಸಮುದ್ರ ಸೇರಿದರೂ ತನ್ನ ಉಪ್ಪಿನ ರುಚಿಯನ್ನು ಎಳ್ಳಷ್ಟೂ ಬಿಟ್ಟುಕೊಡುವುದಿಲ್ಲವಲ್ಲ. ಹಾಗೆ ಮನುಷ್ಯ ಕೂಡ ಕಷ್ಟ ಸುಖ ದುಃಖ ಏನೇ ಇರಲಿ ತನ್ನ ದೃಢತೆಯನ್ನು ಕಾಪಾಡಿಕೊಳ್ಳಬೇಕು. ಸಮುದ್ರದಾಳದಲ್ಲಿ ಎಂತೆಂಥ ಮುತ್ತು, ರತ್ನ, ಮಾಣಿಕ್ಯ, ಹವಳ, ಬೆಳ್ಳಿ, ಬಂಗಾರದಂಥ ಅತ್ಯಂತ ಬೆಲೆಬಾಳುವ ವಸ್ತುಗಳಿದ್ದರೂ ಅದು ಎಂದಾದರೂ ಶ್ರೀಮಂತಿಕೆಯಿಂದ ಬೀಗಿದೆಯೇ? ಇಲ್ಲ. ಹಾಗೆಯೇ ಎಲ್ಲರ ಗುಣಗಳೂ ಇರಬೇಕು. ಅದರೊಳಗೆ, ಮಣ್ಣಿನ ಮೇಲೆ ಜೀವಿಸುವುದಕ್ಕಿಂತಲೂ ಅಧಿಕ ಸಂಖ್ಯೆಯ, ಊಹಿಸಲೂ ಸಾಧ್ಯವಾಗದಂಥ ಜೀವಿಗಳು, ಬೃಹತ್ ಗಾತ್ರದ ತಿಮಿಂಗಲಗಳು, ಬಣ್ಣಬಣ್ಣದ ಮೀನುಗಳಂಥ ಅಪಾರ ಜೀವರಾಶಿ ವಿಹರಿಸುತ್ತಿದ್ದರೂ ಸ್ವಲ್ಪವೂ ಬೀಗದೆ ಹೇಗೆ ತನ್ನ ಸ್ಥಿಮಿತವನ್ನು ಕಾಪಾಡಿಕೊಂಡಿರುತ್ತದೋ ಹಾಗೆ ಮನುಷ್ಯನೂ ಬದುಕಬೇಕೆಂದು ಬುದ್ಧ ಆಶಿಸುತ್ತಾನೆ. ಇಂಥ ಜ್ಞಾನೋದಯ ಬುದ್ಧನಿಗೆ ಆದದ್ದು ನನ್ನ ಜಾತಿಯ ಮರದಡಿಯಲ್ಲಿಯೇ ಎಂಬುದು ನನ್ನ ಪಾಲಿನ ಬಹುದೊಡ್ಡ ಹೆಮ್ಮೆಯಾಗಿದೆ.

ಇರಲಿ. ನಾನು ಅರಣ್ಯ ಇಲಾಖೆಯ ನೌಕರರ ಸಾವಿನ ಬಗ್ಗೆ ಮಾತಾಡುತ್ತಿದ್ದೆನಲ್ಲ. ರಾಜರ ಕಾಲದಿಂದಲೂ, ಬ್ರಿಟಿಷರ ಕಾಲದಿಂದಲೂ ಸರ್ಕಾರದ ನೌಕರರಿಗೆ ರಕ್ಷಣೆ ಎಂಬುದೇ ಇಲ್ಲ. ಒಟ್ಟಾರೆ ಜನಸಂಖ್ಯೆಯ ಒಂದು ಪರ್ಸೆಂಟೂ ಇರದ ಇವರ ಬಗ್ಗೆ ಎಲ್ಲರಿಗೂ ಒಂಥರ ಅಸೂಯೆ, ಅಸಹನೆ ಎಲ್ಲ. ತಮಗಿಲ್ಲದ ಉದ್ಯೋಗದ ಭದ್ರತೆ ಇವರಿಗಿದೆಯಲ್ಲ ಎಂದೋ, ತಿಂಗಳೂ ತಿಂಗಳು ತಪ್ಪದೇ ಸಂಬಳ ಪಡೆಯುತ್ತಾರಲ್ಲ ಎಂದೋ, ಹಾಗೆ ಪಡೆಯುವುದರಲ್ಲಿ ನಮಗೊಂದಿಷ್ಟೂ ಪಾಲು ಕೊಡುವುದಿಲ್ಲ ಎಂದೋ, ಸಂಬಳದ ಜೊತೆಗೆ ಅನುಕೂಲ ಮಾಡಿಸಿಕೊಂಡ ಯಾರೋ ಏನಾದರೂ ಕೊಟ್ಟು ಹೋಗುತ್ತಾರೆಂದೋ, ಹಾಗೆ ಕೊಟ್ಟು ಹೋಗುವ ಗಿಂಬಳದ ಪಾಲೇ ಅಪಾರವಾಗಿ ಹೇಗೆ ಜುಂ ಅಂತ ತಿರುಗುತ್ತಾರೆ ನೋಡ್ರೀ ಅಂತಲೋ ಅಸೂಯೆ ಪಡುವವರೇ ಹೆಚ್ಚು. ಶೆಟ್ಟಿ ಸತ್ತ ಮೇಲೇ ಅವನ ಸಾಲ ಎಷ್ಟು ಅಂತ ಗೊತ್ತಾಗುವುದು ಎಂಬುದೊಂದು ಗಾದೆ ಮಾತು ಇದೆ. ಹೀಗೆಯೇ ಸರ್ಕಾರದ ನೌಕರರದೂ. ಸರ್ಕಾರದ ಆಸ್ತಿಪಾಸ್ತಿಯನ್ನು ಕಾಪಾಡುವಲ್ಲಿ ಅದೆಷ್ಟೋ ಸಲ ಹೀಗೆ ಯಾರದೋ ರೋಷ, ಆಕ್ರೋಶಕ್ಕೆ ಬಲಿಯಾಗಿ ತಮ್ಮ ಜೀವವನ್ನೇ ಕಳೆದುಕೊಂಡುಬಿಡುತ್ತಾರೆ, ಪಾಪ. ಒಂದಷ್ಟು ಲಕ್ಷ ಪರಿಹಾರವನ್ನು ಕೈಗೆ ಕೊಟ್ಟು ಅವರ ಹೆಂಡತಿಗೋ, ಮಕ್ಕಳಿಗೋ ಒಂದು ಕೆಲಸ ಕೊಟ್ಟು ನಷ್ಟ ಪರಿಹಾರ ಮಾಡಲು ಸರ್ಕಾರ ಕ್ರಮವಹಿಸಿದರೂ ಅವರ ಜೀವಕ್ಕಿಂತ ಇವೆಲ್ಲ ಹೆಚ್ಚೇ?.

(ಸಶೇಷ)